(ಇಂದು ದಿನಾಂಕಃ 08-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರಃ ಶ್ರೀ ಬಿ.ಕೆ.ಎನ್. ವಕೀಲರಿಂದಃ**

ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನನ್ನ ಜನ್ಮ ದಿನಾಂಕ 25-06-1962. ದಾವಾ ಸ್ವತ್ತು ನಮ್ಮ ಕುಟುಂಬಕ್ಕೆ ಯಾವ ರೀತಿಯಾಗಿ ಬಂದಿದೆ ಎನ್ನುವ ಮಾಹಿತಿ ನನಗೆ ಇದೆ ಎಂದರೆ ಸರಿ. ನಮ್ಮ ತಂದೆಯ ತಂದೆಯ ಹೆಸರು ಬುದವಂತ ಗೌಡ ಎಂದರೆ ಸರಿ. ನಮ್ಮ ಅಜ್ಜನಿಗೆ ನನ್ನ ತಂದೆ ತಿಮ್ಮಾ ಗೌಡ ಮತ್ತು ಜಾನು ಯಾನೆ ದಾನು ಗೌಡ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ನಮ್ಮ ತಂದೆ ತಿಮ್ಮಾ ಗೌಡ ದೊಡ್ಡವರು ಎಂದರೆ ಸರಿ. ವಾದಿಯರು ಜಾನು ಯಾನೆ ದಾನು ಗೌಡನ ಮಕ್ಕಳು ಮತ್ತು ಮೊಮ್ಮಕ್ಕಳು ಎಂದರೆ ಸರಿ. ದಾವಾ ಸ್ವತ್ತನ್ನು ಬುದವಂತ ಗೌಡ ಉಳುಮೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಕಡವಾಡ ಗ್ರಾಮದ ಹಕ್ಕುಬದಲಾವಣೆ ಸಂಖ್ಯೆ 3813 ನ್ನು ನಾನು ನೋಡಿಲ್ಲ. ನಮ್ಮ ಅಜ್ಜ ದಿನಾಂಕ 07-05-1962 ರಂದು ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅಜ್ಜ ಮೃತಪಟ್ಟ ನಂತರ ನಮ್ಮ ತಂದೆ ಮತ್ತು ಜಾನು ಯಾನೆ ದಾನು ಗೌಡ ಸಂರಕ್ಷಿತ ರೈತರಾದರು ಎಂದು ನಿ.ಪಿ.13 ರಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನಮ್ಮ ಅಜ್ಜನ ಮುಖಾಂತರ ನಮ್ಮ ಕುಟುಂಬಕ್ಕೆ ಬಂದಿವೆ ಎಂದರೆ ಸಾಕ್ಷಿ ನಮ್ಮ ತಂದೆಯ ಕುಟುಂಬಕ್ಕೆ ಮಾತ್ರ ಬಂದಿವೆ ಎಂದು ಹೇಳುತ್ತಾರೆ. ನಮ್ಮ ಅಜ್ಜ, ನಮ್ಮ ತಂದೆ ತಿಮ್ಮಾ ಗೌಡ ಮತ್ತು ಜಾನು ಯಾನೆ ದಾನು ಗೌಡ ಸೇರಿ ದಾವಾ ಸ್ವತ್ತುಗಳನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಗಲಾಟೆಯ ಹಿನ್ನಲೆಯಲ್ಲಿ 6 ತಿಂಗಳು ಜೈಲಿಗೆ ಹೋಗಿದ್ದೆ. ನಾನು ಜಾನು ಯಾನೆ ದಾನು ಗೌಡ ಇವರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದರಿಂದ ಅವರು ಮೃತಪಟ್ಟಿದ್ದು ಆ ಕಾರಣಕ್ಕೆ ನಾನು ಜೈಲಿಗೆ ಹೋಗಿದ್ದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅವರ ಮಕ್ಕಳು ಮಾಡಿ ನನ್ನ ಮೇಲೆ ಹಾಕಿದ್ದಾರೆ ಎಂದು ಹೇಳುತ್ತಾರೆ. ನಾನು ಅವರ ಸ್ವಾಧೀನತೆಯನ್ನು ಬಿಡಿಸುವ ಉದ್ದೇಶದಿಂದ ಅವರ ಮೇಲೆ ಹಲ್ಲೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬದ ಮನೆ ಮುಂಚೆ ಹುಲ್ಲಿನ ಮೇಲ್ಛಾವಣಿ ಮನೆಯಾಗಿತ್ತು ಎಂದರೆ ಸರಿ. ಸದರಿ ಮನೆ ದೊಡ್ಡ ಮನೆಯಾಗಿತ್ತು ಎಂದರೆ ಸರಿಯಲ್ಲ. ನಮ್ಮ ತಂದೆ, ಜಾನು ಯಾನೆ ದಾನು ಗೌಡ ಮತ್ತು ನಮ್ಮ ಅಜ್ಜ ಒಟ್ಟಿಗೆ ವಾಸವಾಗಿದ್ದರು

ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪನ ನಡುವೆ ಪಾಲು ವಿಭಾಗ ಆಗಿರಲಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿಯರ ಮನೆ ಇದೆ ಎಂದರೆ ಸರಿಯಲ್ಲ. ವಾದಿಯರಿಗೆ ಸೇರಿದ ಮನೆ ಸರಕಾರಿ ಜಾಗದಲ್ಲಿ ಇದೆ. ವಾದಿಯರ ಮನೆ ಸರಕಾರಿ ಜಾಗದಲ್ಲಿ ಇದೆ ಎಂದು ತೋರಿಸುವ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. 2 ನೇ ವಾದಿಯ ಮನೆ ದಾವಾ ಐಟಂ ನಂ. 5 ರಲ್ಲಿ ಇದೆ ಎಂದರೆ ಸರಿಯಲ್ಲ. ನಿ.ಡಿ.1 ರಲ್ಲಿ ಅರ್ಜಿದಾರರು ಸಾಗುವಳಿ ಮಾಡುತ್ತಿರುವ ಅವಧಿ ಎಂದು ಕಾಲಂ ಇದೆ ಎಂದರೆ ಸರಿ. ಅನಾದಿ ಕಾಲದಿಂದ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಅನಾದಿ ಕಾಲದಿಂದಲೇ ಅಂದರೆ ನಮ್ಮ ಅಜ್ಜನ ತಂದೆ ಕಾಲದಿಂದ ಉಳುಮೆ ಮಾಡಲಾಗುತ್ತಿದೆ ಎಂಬ ಅರ್ಥ ಬರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆ ಹಿರಿಯರಾಗಿದ್ದರಿಂದ ಅವರು ಕುಟುಂಬದ ಯಜಮಾನರಾಗಿದ್ದರು ಎಂದರೆ ಸರಿ. ನಮ್ಮ ತಂದೆ ಮನೆಯ ಯಜಮಾನರಾಗಿದ್ದ ಸಮಯದಲ್ಲಿ ಫಾರ್ಮ ನಂ. 7 ನ್ನು ತುಂಬಿದ್ದಾರೆ ಎಂದರೆ ಸರಿ. ಅವಿಭಕ್ತ ಕುಟುಂಬದ ಯಜಮಾನರನಾತೆಯಿಂದ ಫಾರ್ಮ ನಂ. 7 ನ್ನು ತುಂಬಿದ್ದರಿಂದ ನಮ್ಮ ತಂದೆಯ ಕುಟುಂಬಕ್ಕೆ ಮತ್ತು ನಮ್ಮ ಚಿಕ್ಕಪ್ಪನ ಕುಟುಂಬಕ್ಕೆ ಹಕ್ಕು ಇದೆ ಎಂದರೆ ಸರಿಯಲ್ಲ.

ನಮ್ಮ ತಂದೆ ಮೃತಪಟ್ಟ ನಂತರ ದಾವಾ ಸ್ವತ್ತುಗಳು ನಮ್ಮ ತಾಯಿಯ ಹೆಸರಿನಲ್ಲಿ ಹಕ್ಕು ಬದಲಾವಣೆಯಾಗಿವೆ ಎಂದರೆ ಸರಿ. ನಮ್ಮ ತಾಯಿ ಜಾನು ಯಾನೆ ದಾನು ಗೌಡರ ಮಕ್ಕಳ ಮೇಲೆ ತುಂಬಾ ಪ್ರೀತಿಯಿಂದ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಾಯಿ ನಮ್ಮ ಚಿಕ್ಕಪ್ಪನ ಮಕ್ಕಳಿಗೆ ಆಸ್ತಿಯನ್ನು ಹಂಚಿಕೆ ಮಾಡಿಕೊಡುತ್ತೇನೆ ಎಂದು ಹೇಳುತ್ತಾ ಬಂದಿದ್ದರು ಎಂದರೆ ಸರಿಯಲ್ಲ. ನಮ್ಮ ತಾಯಿ ಚಂದ್ರಕಾಂತ ದಾನು ಗೌಡ ಇವರಿಗೆ ನೀವೇ ಪಾಲು ವಿಭಾಗ ಮಾಡಿಕೊಳ್ಳಿ ಎಂದು ಜಿ.ಪಿ.ಎ. ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಜಾನು ಯಾನೆ ದಾನು ಗೌಡರ ಕೊಲೆಯಾದ ನಂತರ ಆಸ್ತಿಯನ್ನು ಹಂಚಿಕೆ ಮಾಡಿಕೊಡುತ್ತೇನೆ ಎಲ್ಲರೂ ಶಾಂತ ರೀತಿಯಿಂದ ಇರಿ ಎಂದು ನಮ್ಮ ತಾಯಿ ಹೇಳಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ, ದಾವಾ ಐಟಂ ನಂ.1 ರೈಲ್ವೆ ಇಲಾಖೆಗೆ ಭೂಸ್ವಾಧೀನಗೊಂಡಿದೆ ಎಂದರೆ ಸರಿ. ಭೂಸ್ವಾಧೀನಗೊಂಡ ಜಮೀನಿಗೆ ಸಂಬಂಧಪಟ್ಟಂತೆ ಪರಿಹಾರ ಧನವನ್ನು ನಮ್ಮ ತಾಯಿ ಪಡೆದುಕೊಂಡಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ದಾನು ಗೌಡರ ಮಕ್ಕಳು ಪರಿಹಾರ ಧನ ಕೇಳಿದಾಗ ನಮ್ಮ ತಾಯಿ ಈಗ ಕೊಡಲು ಆಗುವುದಿಲ್ಲ, ನಂತರ ಹಂಚಿಕೆ ಮಾಡಿಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ತಾಯಿ ಪರಿಹಾರ ಧನದಲ್ಲಿ ಹಣ ಕೊಡುತ್ತೇನೆ ಎಂದು ಹೇಳಿದ್ದರಿಂದ ವಾದಿಯರು ಯಾವುದೇ ತಕರಾರು ಹಾಕದೇ ಸುಮ್ಮನಿದ್ದರು ಎಂದರೆ ಸರಿಯಲ್ಲ.

ಪರಿಹಾರ ಧನ ಕೊಟ್ಟ ನಂತರ ನಮ್ಮ ಕುಟುಂಬದ ಸದಸ್ಯರಲ್ಲಿ ಒಬ್ಬರಿಗೆ ನೌಕರಿ ಸಹ ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಮಗನಿಗೆ ನೌಕರಿ ಸಿಗುವ ಉದ್ದೇಶದಿಂದ ವಾದಿಯರಿಗೆ ತಕರಾರು ಹಾಕದೇ ಸುಮ್ಮನಿರಲು ಹೇಳಿದ್ದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ರಲ್ಲಿ ಚಂದ್ರಕಾಂತ ಗೌಡ ಅಂದರೆ ಪ್ರತಿವಾದಿ ನಂ. 17 ಮತ್ತು 18 ರವರ ತಂದೆ 4 ಗುಂಟೆ ಜಮೀನನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದಾನೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಮ್ಮ ತಾಯಿಗೆ ಮೋಸ ಮಾಡಿ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಮ್ಮ ತಾಯಿಗೆ ಅಷ್ಟೇ ಅಲ್ಲದೇ, ವಾದಿಯರಿಗೂ ಸಹ ಪ್ರತಿವಾದಿ ನಂ. 17 ಮತ್ತು 18 ರವರ ತಂದೆ ಮೋಸ ಮಾಡಿದ್ದಾರೆ ಎಂದರೆ ನಮ್ಮ ತಾಯಿಗೆ ಮಾಡಿದ್ದು ಗೊತ್ತು, ವಾದಿಯರಿಗೆ ಮಾಡಿದ ವಿಷಯ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ ನಂ. 17 ಮತ್ತು 18 ರವರ ತಂದೆ ಸದರಿ 4 ಗುಂಟೆ ಜಾಗವನ್ನು ರಮಾಬಾಯಿ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಮಾಬಾಯಿಯವರು ಪ್ರತಿವಾದಿ ನಂ. 19 ರವರಿಗೆ ಸದರಿ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ದಾಖಲಾತಿಗಳನ್ನು

ನಾನು ನೋಡಿದ್ದೇನೆ. ದಾಖಲಾತಿಗಳನ್ನು ನೋಡಿದ್ದರೂ ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯರು 2016 ರಲ್ಲಿ ಓ.ಎಸ್. ನಂ. 7/2016 ನ್ನು ನನ್ನ ವಿರುದ್ಧ ಪಾಲು ವಿಭಾಗ ಕೇಳಿ ಹಾಕಿದ್ದರು ಎಂದರೆ ಸರಿಯಲ್ಲ. ಆ ದಾವೆಯಲ್ಲಿಯೂ ಸಹ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ. ಸದರಿ ದಾವೆ ಇತ್ಯರ್ಥವಾಗದೇ ಕೇಸು ನಡೆಸದೇ ಇದ್ದುದರಿಂದ ವಜಾ ಆಗಿದೆ ಎಂದರೆ ಸರಿ. ವಾದಿಯರು ದಾವೆಯನ್ನು ಪುನರ್ ಸ್ಥಾಪನೆಗಾಗಿ ಮಿಸ್. ನಂ.1/2022 ನ್ನು ದಾಖಲಿಸಿದ್ದರು ಎಂದರೆ ಸರಿ. ಆಗ ಹಿರಿಯರೆಲ್ಲಾ ಸೇರಿ ರಾಜಿ ಮಾಡಿಕೊಳ್ಳಿ ಎಂದು ಮಾತುಕತೆ ಆಗಿದ್ದರಿಂದ ವಾದಿಯರು ಸದರಿ ಕೇಸನ್ನು ವಜಾ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 23-11-2023 ರಂದು ವಾದಿಯರೊಂದಿಗೆ ತಕರಾರು ಮಾಡಿ ಭಾಗ ಕೊಡುವುದಿಲ್ಲ ಎಂದು ಹೇಳಿದ್ದೇವೆ ಎಂದರೆ ಸರಿ. ವಾದಿಯರೆಲ್ಲಾ ಸೇರಿ ದಾವಾಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಬಲ ಪ್ರಯೋಗ ಮಾಡಿ ವಾದಿಯರನ್ನು ದಾವಾ ಸ್ವತ್ತಿನಿಂದ ಹೊರಗೆ ಹಾಕುವ ಉದ್ದೇಶದಿಂದ ನಾವು ತಕರಾರು ಮಾಡುತ್ತಿದ್ದೇವೆ ಅನ್ನುವುದು ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತಹ ಎಲ್ಲಾ ಹಕ್ಕು ಬದಲಾವಣೆಗಳನ್ನು ನೋಡಿದ್ದೀರಿ ಎಂದರೆ ಸಾಕ್ಷಿ ಮೊನ್ನೆ ನೋಡಿದ್ದೇನೆ ಎಂದು ಹೇಳುತ್ತಾರೆ. ಎಲ್ಲಾ ದಾಖಲಾತಿಗಳಲ್ಲಿ ಬುದವಂತ ಗೌಡ ಇವರು ವ್ಯವಸಾಯ ಮಾಡಿಕೊಂಡು ಬಂದಿದ್ದರು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ, ಸಾಕ್ಷಿ

ಮುಂದುವರಿದು ಮುಂಚೆ ನಮ್ಮ ಅಜ್ಜ ಮಾಡಿದ್ದರು, ಅವರು ಮೃತಪಟ್ಟ ನಂತರ ನಾವೇ ಮಾಡಿದ್ದೇವೆ ಎಂದು ಹೇಳುತ್ತಾರೆ. ನಮ್ಮ ತಂದೆಗೆ ಎಷ್ಟು ಹಕ್ಕು ಇದೆಯೋ ಅಷ್ಟೇ ಹಕ್ಕು ಜಾನು ಯಾನೆ ದಾನು ಗೌಡ ಇವರಿಗೂ ಸಹ ದಾವಾ ಸ್ವತ್ತುಗಳಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಯರಿಗೂ ಸಹ ದಾವಾ ಸ್ವತ್ತುಗಳಲ್ಲಿ ಭಾಗ ಇದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ ನಂ. 13, 14(ಎ) ದಿಂದ 14(ಸಿ) ರವರ ಪರ ಶ್ರೀ ಎಂ.ಎಲ್.ಎನ್.(ಎಸ್) ವಕೀಲರಿಂದಃ**

ನಮ್ಮ ತಂದೆಗೆ ನಾವು ಒಟ್ಟೂ 7 ಜನ ಮಕ್ಕಳು. ಅವರಲ್ಲಿ 3 ಜನ ಮೃತಪಟ್ಟಿರುತ್ತಾರೆ. ಸದರಿ 7 ಜನರಿಗೆ ಮಕ್ಕಳು ಇದ್ದಾರೆ. ಪ್ರತಿವಾದಿ ನಂ. 14 ಮೃತಪಟ್ಟಿದ್ದಾರೆ. ಪ್ರತಿವಾದಿ ನಂ. 13 ಜೀವಿತವಾಗಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳು ಎಲ್ಲಾ ನಮ್ಮ ತಂದೆಯವರಿಗೆ ಬಂದಂತಹ ಆಸ್ತಿ ಎಂದರೆ ಸರಿ. ನಮ್ಮ ತಂದೆಯ 7 ಜನ ಮಕ್ಕಳಿಗೂ ಸಮನಾದ ಹಕ್ಕು ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಸಹೋದರಿಯರು ಭಾಗ ಬೇಡ ಎಂದು ಹೇಳಿದ್ದಾರೆ ಎಂದು ಹೇಳುತ್ತಾರೆ. ವಾರಿಸಾ ಮಾಡುವಾಗ ನಮ್ಮ ಸಹೋದರಿಯರು ಬರವಣಿಗೆಯ ಮೂಲಕ ಬೇಡ ಎಂದು ಹೇಳಿದ್ದಾರೆ. ನಮ್ಮ ಸಹೋದರಿಯರು ಆಸ್ತಿ ಬೇಡ ಎಂದು ಬರೆದುಕೊಟ್ಟಂತಹ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಸದರಿ ದಾಖಲಾತಿಯನ್ನು ತಂದು ಹಾಜರುಪಡಿಸಲು ನನಗೆ ತೊಂದರೆ ಇದೆ. ನನ್ನ ಸಹೋದರಿಯರು ಯಾವುದೇ ದಾಖಲಾತಿಯನ್ನು ಕೊಡದೇ ಇರುವುದರಿಂದ ಅದನ್ನು ತಂದು ಹಾಜರುಪಡಿಸಿಲ್ಲ ಅನ್ನುವುದು ಸರಿಯಲ್ಲ. ರೈಲ್ವೆ ಇಲಾಖೆಯವರು ಜಮೀನನ್ನು ಭೂಸ್ವಾಧಿನಪಡಿಸಿಕೊಂಡ ನಂತರ ಎಷ್ಟು ಪರಿಹಾರ ಧನ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಪರಿಹಾರ ಧನ ನಮ್ಮ ತಾಯಿಯ ಖಾತೆಗೆ ಜಮಾ ಆಗಿತ್ತು. ಅದಾದ ನಂತರ ಹೆಚ್ಚುವರಿ ಪರಿಹಾರ ಧನ ಎಷ್ಟು ಬಂದಿದೆ ಎಂದು ನನಗೆ ಗೊತ್ತಿಲ್ಲ. ಅನುಕಂಪದ ನೌಕರಿಯನ್ನು ನಮ್ಮ ಮಗನಿಗೆ ಕೊಟ್ಟಿದ್ದಾರೆ. ನಮ್ಮ ಅಣ್ಣನಿಗೆ ಮಕ್ಕಳು ಇದ್ದಾರೆ ಎಂದರೆ ಸರಿ. ನನ್ನ ಅಣ್ಣನ ಮಕ್ಕಳು ಓದದ್ದಾರೆ, ಅಷ್ಟೊಂದು ಓದಿಲ್ಲ. ಪರಿಹಾರ ಧನವನ್ನು ನಾನು ಒಬ್ಬನೇ ಪಡೆದುಕೊಂಡಿದ್ದು ನನ್ನ ಸಹೋದರ – ಸಹೋರಿಯರಿಗೆ ಪರಿಹಾರ ಧನ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ಅನುಕಂಪದ ಆಧಾರದ ಮೇಲೆ ನೌಕರಿಯನ್ನು ಕೊಟ್ಟಾಗ ನಾನು ನನ್ನ ಸಹೋದರ – ಸಹೋದರಿಯರಿಗೆ ನಾನು ತಿಳಿಸಿಲ್ಲ ಅನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರಿದು ಕರಾರು ಮಾಡಿಕೊಟ್ಟಿದ್ದರು ಎಂದು ಹೇಳುತ್ತಾರೆ. ಇವತ್ತಿನವರೆಗೂ ನನ್ನ ಸಹೋದರಿಯರಿಗೆ ಕೊಡಬೇಕಾದ ಭಾಗವನ್ನು ಕೊಡದೇ ಮೋಸ ಮಾಡಿದ್ದೇನೆ ಅನ್ನುವುದು ಸರಿಯಲ್ಲ. ಈಗ ನಮ್ಮ ಸಹೋದರಿಯರು ಒಂದುವೇಳೆ ಭಾಗ ಕೊಡಲು

ತೊಂದರೆ ಇಲ್ಲ ಎಂದರೆ ಸಾಕ್ಷಿ ಅವರು ಬೇಡ ಎಂದು ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನನ್ನ ಸಹೋದರಿಯರು ಯಾವುದೇ ದಾಖಲಾತಿಯನ್ನು ಬರೆದುಕೊಟ್ಟಿಲ್ಲ, ಅವರು ಬಿಟ್ಟುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಧನ ಬಂದಾಗಲೂ ಸಹ ನಮ್ಮ ಸಹೋದರಿಯರು ಭಾಗ ಕೇಳಿದ್ದು ನಾನು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ಪರಿಹಾರದ ಧನವನ್ನು ನಾನು ಒಬ್ಬನೇ ಪಡೆದುಕೊಂಡಿದ್ದು ಅದರಲ್ಲಿಯೂ ಸಹ ನನ್ನ ಸಹೋದರಿಯರಿಗೆ ಭಾಗ ಕೊಡಲು ನಾನು ಬಾಧ್ಯಸ್ಥನಾಗಿದ್ದೇನೆ ಅನ್ನುವುದು ಸರಿಯಲ್ಲ.

**ಪ್ರತಿವಾದಿ ನಂ. 15 ಮತ್ತು 16 ರವರು ಹಾಜರಿದ್ದು ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ